ಪುರಾಣ ಪಾತ್ರಗಳಲ್ಲಿ ಅಡಗಿರುವ ಎಲ್ಲ ಕಾಲದ ಸಾಂಕೇತಿಕ ಸಂದೇಶಗಳನ್ನು ವಿವರಿಸುವುದು ಅವರ ಉದ್ದೇಶವಾಗಿತ್ತು.

'ರಾಮ ಮತ್ತು ಕೃಷ್ಣ ಪ್ರಾಯಶಃ ಇತಿಹಾಸದ ವ್ಯಕ್ತಿಗಳೇ' ಎನ್ನುವ ಲೋಹಿಯಾರ ಊಹೆಯ ಪ್ರಕಾರ, 'ಶಿವ ಕೂಡ ಅಂಥ ದೊಡ್ಡ ಗಂಗಾನದಿಗೆ ಕಾಲುವೆಯನ್ನಗೆದ ಒಬ್ಬ ನಿರ್ಮಾಣತಜ್ಞನಿರಬಹುದು; ಅವನೊಬ್ಬ ದೊಡ್ಡ ಪಶುವೈದ್ಯನೋ ಮಹಾಪ್ರೇಮಿಯೋ, ಅನುಪಮ ದಾನಶೀಲನೋ ಇದ್ದಿರಬಹುದು.' ಆದರೂ 'ಇವರನ್ನೆಲ್ಲ ಇತಿಹಾಸದ ಪುಟಕ್ಕೆ ಹರಿದು ಅಂಟಿಸಲೆತ್ನಿಸುವುದು ಹಾಸ್ಯಾಸ್ಪದ ಸಾಹಸವಾದೀತು' ಎಂದು ಲೋಹಿಯಾ ಎಚ್ಚರಿಸುತ್ತಾರೆ.

ರಾಮ ಮತ್ತು ಕೃಷ್ಣರ ವ್ಯಕ್ತಿತ್ವವನ್ನು ಹೋಲಿಸುತ್ತಾ ಲೋಹಿಯಾ ಬರೆಯುತ್ತಾರೆ:

'ಕೃಷ್ಣನಾದರೋ ಮಹಾ ಮಾತುಗಾರ. ಅವನು ಕೇಳುತ್ತಿದ್ದುದೂ ಉಂಟು– ಅದನ್ನೇ ನೆಮ್ಮಿ ಮುಂದೆ ಇನ್ನೂ ಚಂದವಾಗಿ ಮಾತನಾಡಲು ಬಂದೀತು ತನಗೆ ಎಂಬ ಕಾರಣಕ್ಕೆ. ಮಾಂತ್ರಿಕವಾದ ಅವನ ಮಾತು ಆ ಹಾದಿ ಹತ್ತಿದವರನ್ನು ಇಂದಿಗೂ ಮರುಳುಗೊಳಿಸುತ್ತದೆ. ರಾಮನಿಗೆ ಅನಿರ್ವಾಚ್ಯದ ಮಂತ್ರಶಕ್ತಿ ತಿಳಿದಿತ್ತು. ತಾನು ಮಾತಾಡಬೇಕಾದಂಥ ಅಥವಾ ಕೃತಿಗಿಳಿಯಬೇಕಾದಂಥ ಸಂದರ್ಭ ತೀರ ಅಗತ್ಯವಾಗಿ ಒದಗುವ ತನಕ ಆತ ಬೇರೆಯವರನ್ನೇ ಮಾತಾಡಲು ಬಿಡುತ್ತಿದ್ದ. ರಾಮ ತನ್ನ ಮಾತಿನಿಂದ ಎಷ್ಟೋ ಅಷ್ಟೇ ಶ್ರವಣ ಕುತೂಹಲದ ನೀರವದಿಂದಲೂ ನಮ್ಮ ಗಮನ ಸೆಳೆಯುತ್ತಾನೆ... ಕೃಷ್ಣ ಕಣಕಣದಲ್ಲೂ ಪವಾಡಪುರುಷ; ಪ್ರವಾಹಗಳೂ, ಸೂರ್ಯಾಸ್ತಗಳೂ ಅವನ ಇಚ್ಛೆಯ ಬಂಟರಾಗಿದ್ದವು; ಅವನು ಸಂಭವ, ಅಸಂಭವಗಳ ನಡುವಣ ಗೆರೆಯನ್ನೇ ಅಳಿಸಿಬಿಟ್ಟ. ರಾಮ ಯಾವುದೇ ಪವಾಡ ಮೆರೆಯಲಿಲ್ಲ.'

ಇಷ್ಟಾಗಿಯೂ, ಇಂಥ ಪುರಾಣ ಪಾತ್ರಗಳನ್ನು ಸೃಷ್ಟಿಸಿದ ನಾಡಿನಲ್ಲಿ, ರಾಮ ಕೃಷ್ಣ ಶಿವರ ಹೆಸರನ್ನು ಜಪಿಸುವ ಭಕ್ತರ ಅಧಃಪತನ ಲೋಹಿಯಾರ ವಿಮರ್ಶಾತ್ಮಕ ಕಣ್ಣಿಗೆ ಬೀಳದೇ ಹೋಗುವುದಿಲ್ಲ:

'ರಾಮಭಕ್ತರು ಮತ್ತೆ ಮತ್ತೆ ಪತ್ನೀಪರಿತ್ಯಾಗ ಪಾರಾಯಣರಾಗಿದ್ದಾರೆ. ಕೃಷ್ಣಭಕ್ತರು ಕಳ್ಳರಾಗಿದ್ದಾರೆ. ಶಿವಭಕ್ತರು ಹೀನಕೊಳಕನ್ನೇ ಪ್ರೀತಿಸುವವರಾಗಿದ್ದಾರೆ. ಅಧಃಪತನಗೊಳ್ಳುತ್ತಾ ಸೀಮಿತ ವ್ಯಕ್ತಿತ್ವ ಕೂಪಮಂಡೂಕವಾಗುತ್ತದೆ. ಸಮೃದ್ಧ ವ್ಯಕ್ತಿತ್ವ ಅನೈತಿಕವಾಗುತ್ತದೆ. ಗಾತ್ರಾತೀತ ವ್ಯಕ್ತಿತ್ವ ಆಕಾರವಿಲ್ಲದ ಹೋಗೆಯಾಗುತ್ತದೆ...'

ರಾಮ, ಕೃಷ್ಣರ ವ್ಯಕ್ತಿತ್ವಗಳನ್ನು ನೋಡನೋಡುತ್ತಾ 'ಗಾಂಧೀಜಿಯಲ್ಲಿ ರಾಮ, ಕೃಷ್ಣರ ಎಳೆಗಳು ಬೆರೆತಿದ್ದು' ಲೋಹಿಯಾಗೆ ಕಾಣುತ್ತದೆ: 'ಗಾಂಧೀಜಿ ಬದುಕನ್ನು ರೂಪಿಸಿಕೊಂಡದ್ದು ಸೀಮಾರೇಖೆಯೊಳಗಿನ ರಾಮನ ಅತ್ಯುಚ್ಚ ಮಾದರಿಯನ್ನೇ ಅನುಸರಿಸಿ; ಅವರು ದೇಶದ ಜನ ಹಾಗೇ ಆಗಲು ಕರೆಕೊಟ್ಟರು. ಆದರೆ ಗಾಂಧಿಯಲ್ಲಿ ಕೃಷ್ಣನ ವ್ಯಕ್ತಿತ್ವದ ಒಂದು ಗಟ್ಟಿ ಎಳೆಯೇ ನೇಯ್ದುಕೊಂಡು ಬಿಟ್ಟಿತ್ತು ಎನಿಸುತ್ತದೆ.'

## ಕಳೆದ ಸಂಚಿಕೆಯಲ್ಲಿ



ಸ್ವಾತಂತ್ರ್ಯ ಪೂರ್ವದಲ್ಲಿ ಆರಂಭವಾದ ಸಾಮಾಜಿಕ ಹೋರಾಟಗಳು ಸ್ವತಂತ್ರ ಭಾರತದಲ್ಲೂ ಮುಂದುವರೆದವು. ಆ ಹೋರಾಟಗಳಿಗೆ ಸ್ಪಷ್ಟವಾದ ತಾತ್ವಿಕತೆ ದೊರಕಿಸಿಕೊಡುವ ನಿಟ್ಟಿನಲ್ಲಿ ಲೋಹಿಯಾ ಪ್ರಮುಖ ಪಾತ್ರ ವಹಿಸಿದರು. ಕಾಶಿಯ ವಿಶ್ವನಾಥ ಮಂದಿರಕ್ಕೆ ಹರಿಜನರಿಗೆ ಪ್ರವೇಶ ದೊರಕಿಸಿಕೊಡುವ ಆಂದೋಲನದಲ್ಲಿ ಸಮಾಜವಾದಿ ಪಕ್ಷವೂ ಭಾಗಿಯಾಗಿತ್ತು. ಪ್ರತಿಭಟನೆಗಳ ಕಾರಣ ನಿರಂತರವಾಗಿ ಕಾನೂನು ಸಂಘರ್ಷ ಎದುರಿಸಬೇಕಾದ ಲೋಹಿಯಾ, ಕಾಯ್ದೆಗಳಲ್ಲಿನ ಅಮಾನವೀಯ ಸಂಗತಿಗಳನ್ನು ಮನಗಂಡು ಅವುಗಳ ಬದಲಾವಣೆಗೆ ಸಂಬಂಧಿಸಿದಂತೆಯೂ ದನಿ ಎತ್ತಿದರು. ಪೆರಿಯಾರ್ ಅವರೊಂದಿಗಿನ ಭೇಟಿ ಅವರ ಆಲೋಚನೆಗಳನ್ನು ಮತ್ತಷ್ಟು ಸ್ಪಷ್ಟಗೊಳಿಸಿತು. ಜಾತಿಪದ್ಧತಿ ನಿರ್ಮೂಲನೆ ಸಾಧ್ಯವಿಲ್ಲದಿರುವುದರಿಂದ, ಹಿಂದುಳಿದ ಜಾತಿಗಳಿಗೆ ನಾಯಕತ್ವದ ಅವಕಾಶ ದೊರೆಯಬೇಕೆಂದು ಸಮಾಜವಾದಿ ಪಕ್ಷ ಪ್ರತಿಪಾದಿಸಿತು. ಪಿಎಚ್‌ಡಿ. ಅಧ್ಯಯನ ನಡೆಸುತ್ತಿದ್ದ ಗೆಳತಿ ರಮಾ ಅವರಿಗೆ ಅಧ್ಯಯನಕ್ಕೆ ಸಂಬಂಧಿಸಿದಂತೆ ಲೋಹಿಯಾ ಹೊಳಹುಗಳನ್ನು ನೀಡುತ್ತಿದ್ದರು. ಗೆಳತಿಯನ್ನು ನೋಡಲು ಯೂರೋಪಿಗೆ ಹೋಗಲು ಅವರ ಮನಸ್ಸು ತವಕಿಸುತ್ತಿತ್ತು.

'ರಾಮ ಕೃಷ್ಣ ಶಿವ' ಸಾಂಸ್ಕೃತಿಕ ಕಥಾನಕದ ಕೊನೆಗೆ ಲೋಹಿಯಾ ಪ್ರಾರ್ಥನೆ ಇದು: 'ತಾಯಿ ಭಾರತಿ, ನಮಗೆ ಶಿವನ ಮನಸ್ಸನ್ನೂ, ಕೃಷ್ಣನ ಹೃದಯವನ್ನೂ, ರಾಮನ ಕಾರ್ಯಪ್ರಪಂಚವನ್ನೂ ಕೊಡು. ಪ್ರಮಾಣಾತೀತವಾದ ಮನಸ್ಸು, ಸಮೃದ್ಧ ಹೃದಯ, ಆದರೆ ಸೀಮಿತವಾದ ಬದುಕು — ಇವುಗಳಿಂದ ನಮ್ಮನ್ನು ನಿರ್ಮಿಸು.'

ಇದು ಸಮಾಜವಾದಿ ರಾಜಕಾರಣಿ, ಲೇಖಕ, ಚಿಂತಕ ಲೋಹಿಯಾರ ಇಡೀ ಬದುಕಿನ ಪೂರ್ಣತ್ವದ ಹುಡುಕಾಟದ ಪ್ರಾರ್ಥನೆಯೂ ಆಗಿರುವಂತೆ ಕಾಣುತ್ತದೆ.

***

ಪುರಾಣ, ಮಹಾಕಾವ್ಯಗಳನ್ನು ಕುರಿತ ಲೋಹಿಯಾ ಚಿಂತನೆ ಭಾರತೀಯ ಸಂಸ್ಕೃತಿ ಚಿಂತನೆಯನ್ನು ಕುರುಡು ಶ್ರದ್ಧಾಭಕ್ತಿ ಹಾಗೂ ವೈಚಾರಿಕ ತಿರಸ್ಕಾರಗಳ ಎರಡು ಅತಿಗಳ ಆಚೆಗೆ ಒಯ್ದು, ವಿಮರ್ಶಾತ್ಮಕ ಸ್ವೀಕಾರದ ಮಾದರಿಯನ್ನು ರೂಪಿಸಿಕೊಟ್ಟಿತು. ಲೋಹಿಯಾ ಭಾರತದ ಶ್ರೇಷ್ಠ ಕಲಾವಿದರಾದ ಎಂ.ಎಫ್. ಹುಸೇನರನ್ನು ಕೂಡ ಲೋಹಿಯಾ ರಾಮಾಯಣದ ಚಿತ್ರಗಳತ್ತ ಸೆಳೆದದ್ದು ಕುತೂಹಲಕರವಾಗಿದೆ.

ಈ ಕುರಿತು ಹುಸೇನ್ ತಮ್ಮ ಆತ್ಮಚರಿತ್ರೆಯಲ್ಲಿ ಬರೆಯುತ್ತಾರೆ:

'...ಅವತ್ತು ಲೋಹಿಯಾಜಿ ತಮ್ಮ ಸಮಾಜವಾದಿ ಸಂಗಾತಿಗಳ ಜೊತೆ ಮೋತಿಭವನಕ್ಕೆ ಬಂದರು. ಸಮಾಜವಾದಿ ಕಾರ್ಯಕರ್ತರು ಗೌರವ ತೋರಿಸಲು ಎದ್ದು ನಿಂತರು. ಹುಸೇನ್ ಎಂಬ ಹುಡುಗ ಬದರಿವಿಶಾಲ ಪಿಟ್ಟಿಯವರ ಪೆನ್ ತೆಗೆದುಕೊಂಡವನೇ ಬಾಚಣಿಗೆಗೆ ಬಗ್ಗದ ಲೋಹಿಯಾ ತಲೆಕೂದಲು, ಅರೆ ತೆರೆದ ತುಂಟ ಕಣ್ಣುಗಳನ್ನು ಚಕಚಕನೆ ಗೆರೆಯಲ್ಲಿ ಮೂಡಿಸಿದ. ಮೂಗು ಬರೆದು ತುಟಿಯ ಬಳಿ ಪೆನ್ ತಂದ ಹುಡುಗ ಗೆರೆ ಎಳೆಯುತ್ತಿರುವುದನ್ನು ನೋಡಿ ಲೋಹಿಯಾಜಿ ನಕ್ಕರು. ಹುಡುಗನನ್ನು ಗಾಢವಾಗಿ ಅಪ್ಪಿಕೊಂಡರು. ಆ ಅಪ್ಪುಗೆ ಹಲವು ವರ್ಷ ಹಾಗೇ ಉಳಿಯಿತು.

'ಒಂದು ಸಂಜೆ ಈ ಹುಡುಗ ಲೋಹಿಯಾಜಿಯನ್ನು ದೆಹಲಿಯ ಕರೀಮ್ ಹೋಟೆಲಿಗೆ ಕರೆದೊಯ್ದ. ಲೋಹಿಯಾಜಿಗೆ ಮುಘಲ್ ಶೈಲಿಯ ಊಟ ಇಷ್ಟವೆಂಬುದು ಹುಡುಗನಿಗೆ ಗೊತ್ತಿತ್ತು. ಹುಡುಗ ಬರೆದಿದ್ದ ನೆಹರೂ ಚಿತ್ರ ನೆಹರೂ ಮನೆಯ ಗೋಡೆಯಲ್ಲಿ ತೂಗುತ್ತಿದ್ದುದು ಲೋಹಿಯಾಜಿಗೆ ನೆನಪಾಯಿತು.

'ಚಮಚೆಯಲ್ಲಿ ಕುರ್ಮಾ ತಿರುಗಿಸುತ್ತಾ ಲೋಹಿಯಾಜಿ ಕತ್ತೆತ್ತಿ ಹುಡುಗನನ್ನು ಕೇಳಿದರು: 'ನಿನಗೆ ನೆಹರೂ ಚಿತ್ರ ಬರೆಯಬೇಕು ಅಂತ ಯಾಕನ್ನಿಸಿತು? 'ಇಲ್ಲಸ್ಟ್ರೇಟೆಡ್ ವೀಕ್ಲಿ'ಯಲ್ಲಿ ಬಂದ ನೆಹರೂ ಚಿತ್ರ ನನಗೆ ಇಷ್ಟವಾಗಿತ್ತು. ಅದರಲ್ಲಿ ನೆಹರೂ ಮುಳುಗುತ್ತಾ ಇದ್ದರು... ಕುತ್ತಿಗೆ ತನಕ ನೀರು...'

'ಲೋಹಿಯಾಜೀ! ಅದೇ ಮಾಡರ್ನ್ ಆರ್ಟ್‌ನ ಸಂಕೀರ್ಣ ಗುಣ. ಇಲ್ಲಿ ನೋಡುಗನಿಗೆ ತನಗೆ ಬೇಕಾದಂತೆ ವ್ಯಾಖ್ಯಾನ ಮಾಡುವ ಹಕ್ಕಿದೆ. ಆದರೆ ಸ್ಟಿಲ್ ಫೋಟೋಗ್ರಾಫ್‌ನಲ್ಲಿ ಈ ಥರ ಸ್ವಾತಂತ್ರ್ಯ ಇರಲ್ಲ.'

ಲೋಹಿಯಾಜಿ ಹುಡುಗನನ್ನು ಮೆಚ್ಚುತ್ತಾ ಬೆನ್ನು ತಟ್ಟಿ, ವಿಷಯ ಬದಲಿಸುತ್ತಾ ಹೇಳಿದರು: 'ನಿನ್ನ ಚಿತ್ರಗಳು ಟಾಟಾ, ಬಿರ್ಲಾ ಮನೆಯ ಡ್ರಾಯಿಂಗ್ ರೂಮುಗಳಲ್ಲಿ ಅಲಂಕಾರವಾಗಿ ತೂಗಾಡ್ತಾ ಇವೆ. ನೀನು ಯಾಕೆ ಒಂಚೂರು ಅದರಿಂದ ಹೊರಕ್ಕೆ ಬರಬಾರದು? ರಾಮಾಯಣವನ್ನು ಪೇಂಟ್ ಮಾಡು. ಅದು ಜನರನ್ನು ತಲ್ಲೀನಗೊಳಿಸುವ ಪುರಾತನ ಕತೆ. ನಿನ್ನ ಪೇಂಟಿಂಗ್ಸ್‌ನ ಹಳ್ಳಿಗಳಿಗೆ ತಗೊಂಡು ಹೋಗು. ಈ ಸಿಟಿಗಳಲ್ಲಿ ಗ್ಯಾಲರಿ ಅಂತೀರಲ್ಲ, ಅಲ್ಲಿ ಮುಚ್ಚಿದ ಬಾಗಿಲುಗಳ ನಡುವೆ ಜನ ಪ್ಯಾಂಟ್ ಜೇಬಲ್ಲಿ ಕೈ ಇಟ್ಟುಕೊಂಡು ನಿನ್ನ